ರಸದೂತಗಳ ಚಟುವಟಿಕೆ ತುಂಬಾ ಹೆಚ್ಚಿರುತ್ತದೆ. ಅಂಥ ಸಂದರ್ಭಗಳಲ್ಲಿ ದಾರಿಹೋಕರ ಮೇಲೆ ದಾಳಿಯಾಗುತ್ತವೆ.

3. ಹಗ್ಗ ಚೈನುಗಳಿಂದ ಕಟ್ಟಿ ಹಾಕಿ ಆಹಾರ ನೀಡದೆ ಹಿಂಸಿಸಿದಾಗ ಇಲ್ಲವೇ ತಿನ್ನುವಾಗ, ನೀರು ಕುಡಿಯುವಾಗ ಕಿರಿಕಿರಿ ಮಾಡಿದರೆ ಆಕ್ರಮಣಕಾರಿಯಾಗುತ್ತವೆ.

### ಲೆಕ್ಕವಷ್ಟೇ ಮುಖ್ಯ, ಕಾಳಜಿ ಶೂನ್ಯ!

ಪ್ರತಿ ಬಾರಿಯೂ ವ್ಯಕ್ತಿಯೊಬ್ಬ ರೇಬಿಸ್ ಲಸಿಕೆಗಾಗಿ ಆಸ್ಪತ್ರೆಗೆ ಹೋದರೆ ಅದನ್ನೇ ನಾಯಿಕಡಿತದ ಪ್ರಕರಣ ಎಂದು ಬಿಂಬಿಸಲಾಗುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಜನರಿಗೆ ಗಾಯವೇ ಆಗಿರುವುದಿಲ್ಲ. ನಾಯಿಗೆ ಲಸಿಕೆ ಹಾಕಿಸಿದ್ದರೂ ಜನ ಲಸಿಕೆ ಹಾಕಿಸಿಕೊಳ್ಳುತ್ತಾರೆ. ಆರೋಗ್ಯ ಇಲಾಖೆಗೆ ಲಸಿಕೆ ಪಡೆದವರ ಸಂಖ್ಯೆ ಹೆಚ್ಚಬೇಕಷ್ಟೆ ಎಂಬುದು ಪ್ರಾಣಿ ಸಂರಕ್ಷಣಾ ತಂಡದವರ ಟೀಕೆ. ಎಷ್ಟೋ ಸಂದರ್ಭಗಳಲ್ಲಿ ಜನ ತಾವು ಸಾಕಿದ ನಾಯಿಗಳಿಂದಲೇ ಕಚ್ಚಿಸಿಕೊಂಡಿರುತ್ತಾರೆ. ಅದನ್ನೂ ಬೀದಿನಾಯಿ ಕಡಿತದ ಲೆಕ್ಕಕ್ಕೆ ಸೇರಿಸಿಬಿಡುತ್ತಾರೆ. ಬೀದಿ ಬದಿಯ ಪ್ರಾಣಿಗಳು ಮನುಷ್ಯರಿಗೆಷ್ಟು ಅನನುಕೂಲ ಉಂಟುಮಾಡುತ್ತವೆಯೋ ಹಾಗೆಯೇ ತಮಗೇ ತೊಂದರೆ ತಂದುಕೊಳ್ಳುತ್ತವೆ.

ಜೀವ ಸರಪಳಿಯಲ್ಲಿ ಮನುಷ್ಯನಿಗಿರುವ ಶ್ರೇಷ್ಠತೆಯಿಂದಾಗಿ ನಾಯಿಯಷ್ಟೇ ಅಲ್ಲ, ಇತರ ಪ್ರಾಣಿಗಳೂ ಅವನಿಂದ ತೊಂದರೆಗೊಳಗಾಗುತ್ತವೆ. ಬೀದಿನಾಯಿಗಳಿಗಿಂತ ಸಾಕಿದ ನಾಯಿಗಳ ಕಡಿತ ಶೇ. 80ರಷ್ಟು ಹೆಚ್ಚು. ಆದರೂ ಪ್ರತಿ ನಾಯಿ ಕಡಿತವನ್ನು ಬೀದಿನಾಯಿ ಕಡಿತಕ್ಕೆ ತಳುಕು ಹಾಕಲಾಗುತ್ತಿದೆ. ನಾಯಿಕಡಿತ ಸಾಕಿದ ನಾಯಿಯಿಂದ ಆಗಿದೆಯೋ ಅಥವಾ ಬೀದಿನಾಯಿಯಿಂದ ಆಗಿದೆಯೋ ಎಂಬುದನ್ನು ಪ್ರತ್ಯೇಕವಾಗಿ ದಾಖಲಿಸುವಂತೆ ಎಲ್ಲ ವೈದ್ಯಕೀಯ ಸಂಸ್ಥೆಗಳಿಗೆ ಕಟ್ಟುನಿಟ್ಟಿನ ನಿಯಮ ರೂಪಿಸಿ ಆದೇಶ ಹೊರಡಿಸಬೇಕು ಎಂಬ ಒತ್ತಾಯ ಕೇಂದ್ರ ಆರೋಗ್ಯ ಸಚಿವಾಲಯದ ಮೇಲೆ ಜೋರಾಗಿದೆ. ಲಸಿಕೆ ಹಾಕಿಸಿಕೊಂಡವರಿಗೆ ಪ್ರತ್ಯೇಕ ಸಂಖ್ಯೆ ನೀಡಬೇಕು. ಎರಡು, ಮೂರನೆಯ ಸಲ ಲಸಿಕೆ ಹಾಕಿಸಿಕೊಂಡರೆ ಅದನ್ನು ನಾಯಿ ಕಡಿತ ಪ್ರಕರಣವೆಂದು ಪರಿಗಣಿಸಬಾರದು ಎನ್ನುವ ವಾದವೂ ಇದೆ.

ಹುಟ್ಟುವ ನಾಯಿಮರಿಗಳೆಲ್ಲ ವಯಸ್ಕ ಹಂತ ತಲುಪುವುದಿಲ್ಲ. ಶೇ. 19ರಷ್ಟು ಮಾತ್ರ ಪ್ರಾಯಕ್ಕೆ ಬರುತ್ತವೆ. ಯಾವಾಗ ಮನುಷ್ಯರು ಆರೈಕೆ ಮಾಡುತ್ತಾರೋ ಆಗ ಅವುಗಳ ಸಂಖ್ಯೆ ಏರುತ್ತದೆ. ಕಳೆದ 20 ವರ್ಷಗಳಿಂದ ನಾಯಿಗಳ ಸಂಖ್ಯೆ ಏರಿಕೆಗೆ ಇದೂ ಕಾರಣ. ನಾಯಿಗಳ ಸಂತಾನಶಕ್ತಿ ಹರಣ ಕಾರ್ಯಕ್ರಮ ಶುರುವಾಗಿ 20 ವರ್ಷಗಳಾಗಿವೆ. ಆದರೂ ಅವುಗಳ ಸಂಖ್ಯೆಯಲ್ಲಿ ಏರಿಕೆ ಕಂಡುಬಂದಿರುವುದಕ್ಕೆ ಮನುಷ್ಯರು ನಾಯಿಗಳೆಡೆ ತೋರುತ್ತಿರುವ ಆರೈಕೆ ಅಕ್ಕರೆಗಳೇ ಕಾರಣ.

### ನಮ್ಮ ಜವಾಬ್ದಾರಿಯೇನು?

ಕಾನೂನಾತ್ಮಕ ಪರಿಹಾರಗಳು ಕೆಲಸ ಮಾಡುತ್ತಿಲ್ಲ. ಹಾಗಾದರೆ ನಾಗರಿಕರು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಏನು ಮಾಡಬಹುದು?

1. ಬೀದಿನಾಯಿ ಕಂಡ ತಕ್ಷಣ ಅಲ್ಲಲ್ಲಿಯೇ ಆಹಾರ ನೀಡುವುದನ್ನು ನಿಲ್ಲಿಸಬೇಕು.

2. ಮಕ್ಕಳು ಓಡಾಡುವ, ಆಟವಾಡುವ ಜಾಗಗಳಿಂದ ದೂರದಲ್ಲಿ ಆಹಾರ ನೀಡಿಕೆ ಕೇಂದ್ರಗಳನ್ನು ಸ್ಥಾಪಿಸಬೇಕು. ಅಲ್ಲಿಯೇ ಆಹಾರ ನೀಡಬೇಕು.

ಒಂದು ಶಾಸ್ತ್ರೀಯ ಅಧ್ಯಯನ ಕೈಗೊಂಡಿರುವ ದೆಹಲಿಯ ವಕೀಲೆ ಶಾಲಿನಿ ಅಗರ್ವಾಲ್, 20 ಅನಿಮಲ್ ಬರ್ತ್ ಕಂಟ್ರೋಲ್‌ಗಳ ಬಗ್ಗೆ ಗಾಬರಿ ಹುಟ್ಟಿಸುವ ವರದಿ ಕೊಟ್ಟಿದ್ದಾರೆ. ಸಂತಾನಶಕ್ತಿ ಹರಣ ಮತ್ತು ಲಸಿಕೆ ಹಾಕಲು ಬೀದಿನಾಯಿಗಳನ್ನು ಕೂಡಿ ಹಾಕಿರುವ ಜಾಗಗಳಲ್ಲಿ ರಾತ್ರಿ ಪಾಳಿಯ ಕೆಲಸಗಾರರೇ ಇಲ್ಲ. ಸಣ್ಣ ಜಾಗಗಳಲ್ಲಿ ಅತಿ ಹೆಚ್ಚು ನಾಯಿಗಳಿವೆ ಮತ್ತವು ಅನಾರೋಗ್ಯಕ್ಕೀಡಾಗಿವೆ. ಇದು ಹಣವುಳಿಸಲು ಮಾಡಿದ ಪ್ರಯತ್ನ ಎಂದಿದ್ದಾರೆ ಶಾಲಿನಿ. ಶಸ್ತ್ರಚಿಕಿತ್ಸೆಗೊಳಗಾಗಿರುವ ನಾಯಿ ಯಾವುದು ಎಂದು ಗುರುತು ಹಿಡಿಯಲು ಕನಿಷ್ಠ ಪಕ್ಷ ನಾಯಿಗಳಿಗೆ ಒಂದು ಗುರುತನ್ನೂ ಹಾಕಿಲ್ಲ. ಇದು ಕಾನೂನಿಗೆ ವಿರುದ್ಧ ಎಂದು ಅವರ ವರದಿಯಲ್ಲಿ ಉಲ್ಲೇಖಿಸಲಾಗಿದೆ.

'ಚಿಕಿತ್ಸೆ ನೀಡಿದ್ದೇವೆ' ಎಂದು ABCಯವರು ಕೊಡುವ ಲೆಕ್ಕವೇ ಬೇರೆ, ವಾಸ್ತವವೇ ಬೇರೆ ಎಂಬ ಮಾತುಗಳಿವೆ. ನಿಜ ಏನೆಂದು ತಿಳಿಯಲು ಶಾಲಿನಿ, ಮಾಹಿತಿ ಹಕ್ಕು ಕಾಯ್ದೆ ಬಳಸಿಕೊಂಡು ದೆಹಲಿಯ ABC ಕೇಂದ್ರವೊಂದರಿಂದ ಮಾಹಿತಿ ಪಡೆದುಕೊಂಡರು. ದೊಡ್ಡ ತಾರಾತಿಗಡಿ ಆಗಿದ್ದುದು ಗಮನಕ್ಕೆ ಬಂತು. ಫೆಬ್ರುವರಿ 2022ರಿಂದ ಒಂದು ಸಾವಿರ ಲಸಿಕೆ ಪಡೆದುಕೊಂಡಿದ್ದ ಕೇಂದ್ರವು ಒಂದು ವರ್ಷದ ಅವಧಿಯಲ್ಲಿ 3700 ನಾಯಿಗಳಿಗೆ ಲಸಿಕೆ ಹಾಕಿದ್ದೇವೆ ಎಂದು ಲೆಕ್ಕ ನೀಡಿತ್ತು. ಕಳೆದ 20 ವರ್ಷಗಳಿಂದ ನಾಯಿಗಳ ಸಂಖ್ಯೆ ನಿಯಂತ್ರಣಕ್ಕೆ ಬಾರದಿರಲು ಇದಕ್ಕಿಂತ ದೊಡ್ಡ ಸಾಕ್ಷಿ ಬೇಕೆ ಎನ್ನುವ ಶಾಲಿನಿ, ಬೀದಿನಾಯಿಗಳ ನಿಯಂತ್ರಣಕ್ಕಾಗಿ ಜಾರಿಗೆ ತಂದ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿರುವುದನ್ನು ಎತ್ತಿತೋರಿದರು.

### ಮಿಶ್ರ ಅಭಿಪ್ರಾಯ

ಬೀದಿನಾಯಿಗಳಿಂದಾಗುತ್ತಿರುವ ಅವಾಂತರ ಮತ್ತು ಪರಿಹಾರದ ಕುರಿತು ತರಹೇವಾರಿ ಅಭಿಪ್ರಾಯಗಳು ಕೇಳಿಬರುತ್ತಿವೆ. ಬೆಂಗಳೂರು ಮೂಲದ 'ಟ್ರೂ ಕನ್ಸರ್ವೇಶನ್ ಅಲಯನ್ಸ್' ಎಂಬ ಸ್ವಯಂ ಸೇವಾ ಸಂಸ್ಥೆ 'ಸಾಮೂಹಿಕ ವಧೆಯೇ ಸರಿ' ಎನ್ನುತ್ತದೆ. ಜಗತ್ತಿನಾದ್ಯಂತ ಉಪದ್ರವಕಾರಿ ಪ್ರಾಣಿಗಳನ್ನು ಕರುಣೆಯಿಂದಲೇ ವಧೆ ಮಾಡಲಾಗುತ್ತದೆ, ನೆದರ್‌ಲೆಂಡ್ಸ್‌ನಲ್ಲಿ ವಾರಸುದಾರರಿಲ್ಲದ ಮತ್ತು ಕಾಯಿಲೆಯುಳ್ಳ ನಾಯಿಗಳಿಗೆ ದಯಾಮರಣ ನೀಡುವ ಪದ್ಧತಿಯಿದೆ, ಅದನ್ನೇ ಇಲ್ಲೂ ಅನುಸರಿಸಬಹುದು ಎನ್ನುತ್ತದೆ.

ಪರಿಸರ ತಜ್ಞ ಮಾಧವ ಗಾಡ್ಗೀಳರ ಅಭಿಪ್ರಾಯವೂ ಇದೇ ಆಗಿದೆ. ಪರಿಸರ ಮತ್ತು ಆರ್ಥಿಕತೆಗಳ ದೃಷ್ಟಿಯಿಂದ ಬಿಡಾಡಿ ನಾಯಿಗಳ ವಧೆ ತಪ್ಪಲ್ಲ. ಅನಿಯಂತ್ರಿತ ಬೆಳವಣಿಗೆಯಿಂದಾಗಿ ಅವು ದಾಳಿಕೋರತನ ಬೆಳೆಸಿಕೊಂಡಿವೆ. ಮಿಜೋರಾಂ, ಮಣಿಪುರ ಮತ್ತು ದಕ್ಷಿಣ ಏಷ್ಯಾದ ಹಲವು ದೇಶಗಳಲ್ಲಿ ನಾಯಿಯ ಮಾಂಸವನ್ನು ತಿನ್ನಲು ಬಳಸುತ್ತಾರೆ ಎನ್ನುವ ಗಾಡ್ಗೀಳರು, 'ನಾಯಿಗಳ ವಧೆ ತಪ್ಪಲ್ಲ' ಎನ್ನುತ್ತಾರೆ.

'ಪೀಪಲ್ ಫಾರ್ ಎಥಿಕಲ್ ಟ್ರೀಟ್‌ಮೆಂಟ್ ಆಫ್ ಅನಿಮಲ್ಸ್' (PETA) ಸಂಘಟನೆಯ ರಾಧಿಕಾ ಸೂರ್ಯವಂಶಿ, 'ಸಂತಾನ ನಿಯಂತ್ರಕ ಕಾನೂನು ಬರುವುದಕ್ಕಿಂತ ಮುಂಚೆ ಸಾಮೂಹಿಕ ವಧೆ ನಡೆಯುತ್ತಿತ್ತು ನಿಜ. ಜನ ಅತ್ಯಂತ ಕ್ರೂರವಾಗಿ ವಿಷಹಾಕಿ ಕೊಲ್ಲುತ್ತಾರೆ, ಅದು ಅಮಾನವೀಯ. ಸಂತಾನನಿಯಂತ್ರಣ ಕ್ರಮ ಸರಿಯಾಗಿ ಜಾರಿಗೆ ಬಂದಿದ್ದರೆ ಇಂಥ ಸಂದರ್ಭವೇ ಬರುತ್ತಿರಲಿಲ್ಲ' ಎನ್ನುತ್ತಾರೆ. ಕಲ್ಲು ಹೊಡೆದು ಸಾಯಿಸುವುದು, ಪೆಟ್ರೋಲ್ ಸುರಿದು ಸುಟ್ಟು ಹಾಕುವುದು, ಮುಂತಾದ ಕ್ರೂರ ಕ್ರಮಗಳು ಪೂರ್ವ ಯೂರೋಪಿನ ದೇಶಗಳಲ್ಲಿ ನಡೆಯುತ್ತಿದ್ದವು. ಇದು ಅಕ್ಷಮ್ಯ ಎನ್ನುವುದು ಅವರ ಅಭಿಪ್ರಾಯ.

ನಾಯಿಗಳು ಎಲ್ಲೆಂದರಲ್ಲಿ ಮುಕ್ತವಾಗಿ ಕೂಟಕ್ರಿಯೆ ನಡೆಸುವಾಗ ದಾರಿಹೋಕರು, ಮಕ್ಕಳಂದಿಗರು ಮನಸ್ಸಿಗೆ ಕಸಿವಿಸಿ ಮಾಡಿಕೊಳ್ಳುತ್ತಾರೆ. ಅದೇನು? ಏಕೆ? ಎಂದು ಪ್ರಶ್ನೆ ಕೇಳುವ ಮಗುವಿಗೆ ಸರಿ ಉತ್ತರ ನೀಡಲಾಗದೆ ಒದ್ದಾಡುತ್ತಾರೆ. ಅದರ ಕಡೆ ನೋಡದಂತೆ ಕಣ್ಣು ಮುಚ್ಚುತ್ತಾರೆ. ಅದು ಕೆಟ್ಟದ್ದಿರಬೇಕೆಂದು ತಿಳಿಯುವ ಮಗು ಅದರ ಕುರಿತು ಅಸಹ್ಯ ಭಾವನೆ, ಇಲ್ಲವೆ ಭಯ ತಾಳುತ್ತದೆ. ಅದರಿಂದ ದೂರವಾಗಲು ಅದಕ್ಕೆ ಕಲ್ಲು ಹೊಡೆಯುವುದು, ಓಡಿಸಲು ಪ್ರಯತ್ನಿಸುವುದನ್ನು ಮಾಡುತ್ತಾರೆ. ಆಗ ಅಪಾಯದ ಪುಟ ತೆರೆದುಕೊಳ್ಳುತ್ತದೆ ಎಂಬುದು ಅನೇಕ ಪೋಷಕರ ಅಭಿಪ್ರಾಯ. ಸಾಕುನಾಯಿಯ ಮಾಲೀಕರ ಜವಾಬ್ದಾರಿಗಳನ್ನು ಮತ್ತಷ್ಟು ಹೆಚ್ಚಿಸಬೇಕು ಮತ್ತು ಸಾರ್ವಜನಿಕವಾಗಿ ಆಹಾರ ನೀಡುವುದನ್ನು ನಿಲ್ಲಿಸಬೇಕು ಎನ್ನುವ ಅಭಿಪ್ರಾಯಗಳು ತಜ್ಞರಿಂದ ವ್ಯಕ್ತವಾಗಿವೆ.

## ಅಧ್ಯಾಯ 2

### ಈ 'ನರ'ನಿಗೆ 'ವಾನರ' ಚೇಷ್ಟೆ

ಹೆಸರು ಗುಲ್‌ಖಾನ್. ಈತನಿಗೆ ರಾಷ್ಟ್ರಪತಿ ಭವನದಿಂದ ಲೋಕಸಭೆಯವರೆಗೂ ಎಲ್ಲವೂ, ಎಲ್ಲರೂ ಗೊತ್ತು. ಪ್ರಧಾನಿ ಕಚೇರಿಯ ವಿಸಿಟರ್ಸ್ ಲಿಸ್ಟ್‌ನಲ್ಲಿ ಈತನ ಹೆಸರಿದೆ. ನೀತಿ ಆಯೋಗ, ವಾಣಿಜ್ಯ ಹಾಗೂ ಹಣಕಾಸು ಸಚಿವಾಲಯದಿಂದಲೂ ಈತನಿಗೆ ಆಗಾಗ ಟೆಲಿಫೋನ್ ಕರೆ ಬರುತ್ತದೆ.

ಗುಲ್‌ಖಾನ್‌ನ ಕೆಲಸ, ಜನರಿಗೆ ಉಪಟಳ ನೀಡುವ ಮಂಗಗಳನ್ನು ವಾಸಸ್ಥಳಗಳಿಂದ ದೂರ ಓಡಿಸುವುದು! ಕಳೆದ ಮೂರು ದಶಕಗಳಿಂದ ಈ ಕೆಲಸ ಮಾಡುತ್ತಿರುವ ಗುಲ್‌ಖಾನ್‌ನ ಕುಟುಂಬಸ್ಥರು ದೆಹಲಿಯ ರಾಜಕೀಯ ಪಡಸಾಲೆಗೆ ತುಂಬಾ ಬೇಕಾದವರು. ಸಚಿವಾಲಯದ ಸುತ್ತಲಿನ